## ಕೃತಜ್ಞತೆಗಳು

ನೆಫ್ರೋ-ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ಗೌರವಾನ್ವಿತ ಅಧ್ಯಕ್ಷರಾದ ಸನ್ಮಾನ್ಯ ಶ್ರೀ. ಸಿದ್ದರಾಮಯ್ಯ, ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರಾದ ಸನ್ಮಾನ್ಯ ಡಾ|| ಶರಣ ಪ್ರಕಾಶ ರುದ್ರಪ್ಪ ಪಾಟೀಲ್, ಮಾನ್ಯ ಮಂತ್ರಿಗಳು, ವೈದ್ಯಕೀಯ ಶಿಕ್ಷಣ ಹಾಗೂ ಆಡಳಿತ ಮಂಡಳಿಯ ಮಾನ್ಯ ಸದಸ್ಯರುಗಳು ನೀಡಿದ ಮಾರ್ಗದರ್ಶನ ಮತ್ತು ಸಹಕಾರಕ್ಕೆ ಸಂಸ್ಥೆಯು ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಸಂಸ್ಥೆಯ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಜೊತೆಗೆ ನೂತನ ಕಾರ್ಯಕ್ರಮಗಳನ್ನು ಯೋಜಿಸಲು ಸಹಕಾರ ನೀಡಿದ ಸಂಸ್ಥೆಯ ಆರ್ಥಿಕ ಸಮಿತಿ ಅಧ್ಯಕ್ಷರಾದ ಶ್ರೀ. ಐ.ಎಸ್.ಎನ್ ಪ್ರಸಾದ್, ಭಾ.ಆ.ಸೇ., ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ 2017-18ನೇ ಸಾಲಿನ ವೈದ್ಯಕೀಯ ಶಿಕ್ಷಣ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ. ಮಂಜುಲ. ವಿ., ಭಾ.ಆ.ಸೇ., ಮತ್ತು ಸಮಿತಿಯ ಸದಸ್ಯರುಗಳು, ಅಧಿಕಾರಿಗಳು, ಸಿಬ್ಬಂದಿಯ ಸಹಕಾರಕ್ಕೆ ಸಂಸ್ಥೆಯು ಮೆಚ್ಚುಗೆ ವ್ಯಕ್ತಪಡಿಸುತ್ತದೆ.

ಸಂಸ್ಥೆಯ ಎಲ್ಲಾ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಲು ಸಂಸ್ಥೆಯ ವೈದ್ಯರು, ಅರೆ-ವೈದ್ಯಕೀಯ ಮತ್ತು ವೈದ್ಯಕಿಯೇತರ ಸಿಬ್ಬಂದಿ ವರ್ಗದವರು ನೀಡಿದ ಸೇವೆಗೆ ಸಂಸ್ಥೆಯು ಮೆಚ್ಚುಗೆ ವ್ಯಕ್ತಪಡಿಸುತ್ತದೆ.



## ನೆಫ್ರೋ-ಯುರಾಲಜಿ ಸಂಸ್ಥೆ,
## ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ,
## ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-02.

### ವಿಷಯ : ವಾರ್ಷಿಕ ವರದಿ
### 2017-18

| ಕ್ರಮ ಸಂಖ್ಯೆ | ವಿಷಯ ಸೂಚಿ |
|---|---|
| 01 | ಸ್ಥಾಪನೆ ಮತ್ತು ಪರಿಚಯ |
| 02 | 2017-18ನೇ ಸಾಲಿನ ವಾರ್ಷಿಕ ವರದಿ, ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು |
| 03 | ಭಾವಿ ಕಾರ್ಯಕ್ರಮಗಳು |
| 04 | 2017-18 ನೇ ಸಾಲಿನ ಆಡಳಿತ ಮಂಡಳಿ ಮತ್ತು ಸಾಮಾನ್ಯ ಸಭೆ ಸದಸ್ಯರು ಮತ್ತು ವಿಳಾಸ |
| 05 | ವೈದ್ಯಕೀಯ ಹಾಗೂ ವೈದ್ಯಕಿಯೇತರ ಬೋಧಕ ಮತ್ತು ಸಿಬ್ಬಂದಿ ವರ್ಗದವರು |
| 06 | 2017-18ನೇ ಲೆಕ್ಕ ಪರಿಶೋಧನಾ ವರದಿ ಮತ್ತು ವಾರ್ಷಿಕ ಲೆಕ್ಕಪತ್ರಗಳು |

01 :-

## ಸ್ಥಾಪನೆ ಮತ್ತು ಪರಿಚಯ:

ನೆಫ್ರೋ-ಯುರಾಲಜಿ ಸಂಸ್ಥೆಯು, ಮೂತ್ರಪಿಂಡ ಮತ್ತು ಮೂತ್ರಕೋಶ ಕಾಯಿಲೆಗಳಿಗೆ ಚಿಕಿತ್ಸೆ ನೀಡುವಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮಗಳು 1960ರ ಮೇರೆಗೆ ದಿನಾಂಕ: 19.01.2004 ರಂದು ನೋಂದಾಯಿಸಲ್ಪಟ್ಟಿದೆ. ಲಾಭ ಗಳಿಸುವ ಉದ್ದೇಶವಿಲ್ಲದೆ, ಸರ್ಕಾರದ ಅನುದಾನದ ನೆರವಿನಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ, ಈ ಹಿಂದೆ ಕಾರ್ಯನಿರ್ವಹಿಸಿ ತೆರವು ಮಾಡಿರುವ ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ಕಟ್ಟಡದಲ್ಲಿ ರೂಪುಗೊಂಡಿದ್ದು, ದಿನಾಂಕ 09.04.2007ರಿಂದ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸುತ್ತಿದೆ.

**ಪ್ರಮುಖ ಕರ್ತವ್ಯಗಳು:**

- ನೆಫ್ರೋ-ಯುರಾಲಜಿ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ ಕಾಯಿಲೆಗಳ ವಿವರಣೆ ನೀಡುವ ಒಂದು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯನ್ನು ಸ್ಥಾಪಿಸಿ, ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುವುದು.
- ನೆಫ್ರೋ-ಯುರಾಲಜಿಗೆ ಸಂಬಂಧಿಸಿದ ಕಾಯಿಲೆಗಳನ್ನು ಹೊಂದಿರುವ ರೋಗಿಗಳಿಗೆ ಮುಂದುವರಿದ ಸಮರ್ಪಕ ಚಿಕಿತ್ಸೆ ಒದಗಿಸುವುದು.
- ನೆಫ್ರೋ-ಯುರಾಲಜಿ ವೈದ್ಯ ವಿಜ್ಞಾನ ಕ್ಷೇತ್ರದಲ್ಲಿನ ಕಾಯಿಲೆಗಳ ಬಗ್ಗೆ ತರಬೇತಿ, ಸಂಶೋಧನೆ, ರೋಗ ವಿದ್ಯಾಭ್ಯಾಸ, ರೋಗ ನಿರ್ಧಾರ, ಚಿಕಿತ್ಸೆಗಳಿಗೆ ನೆರವು ಮತ್ತು ಉತ್ತೇಜನ ನೀಡುವುದು.
- ಮೂತ್ರಜನಕಾಂಗದ ಕಾಯಿಲೆಗಳಾದ ಮೂತ್ರಜನಕಾಂಗ ವೈಫಲ್ಯ, ಮೂತ್ರಪಿಂಡ ಕಸಿ (ಜೋಡಣೆ) ನೆರವೇರಿಸುವುದು.
- ರಾಜ್ಯದ ಜಿಲ್ಲಾ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳಿಂದ ನೆಫ್ರೋ-ಯುರಾಲಜಿಗೆ ಸಂಬಂಧಿಸಿದ ಕಾಯಿಲೆಯಿರುವ ರೋಗಿಗಳನ್ನು ತಪಾಸಣೆಗಾಗಿ ಈ ಸಂಸ್ಥೆಗೆ ಕಳುಹಿಸಿದಾಗ ರೋಗಿಯ ಚಿಕಿತ್ಸೆ ಹಾಗೂ ಆರೋಗ್ಯ ಶಿಕ್ಷಣ ಒದಗಿಸುವುದು.
- ವೈಜ್ಞಾನಿಕ ಸಭೆಗಳು, ವಿಚಾರ ಸಂಕೀರ್ಣಗಳು, ಗೋಷ್ಠಿ, ಕಾರ್ಯಗಾರ, ಸ್ನಾತಕೋತ್ತರ ಶಿಕ್ಷಣ ನೀಡುವುದು.



## ಆಡಳಿತ ವ್ಯವಸ್ಥೆ ಮತ್ತು ರಚನೆ:

ಸಂಸ್ಥೆಗೆ ಎರಡು ಪ್ರಮುಖ ಸಂವಿಧಾನಾತ್ಮಕ ಮಂಡಳಿಗಳಿವೆ. ಆಡಳಿತ ಮಂಡಳಿ ಮತ್ತು ಸಾಮಾನ್ಯ ಮಹಾಮಂಡಳಿ. ಕರ್ನಾಟಕ ಸರ್ಕಾರವು ನೇಮಕ ಮಾಡುವ ಸದಸ್ಯರು ಆಡಳಿತ ಮಂಡಳಿ ಮತ್ತು ಸಾಮಾನ್ಯ ಮಹಾಮಂಡಳಿಯ ಸದಸ್ಯರಾಗಿರುತ್ತಾರೆ.

ಸಾಮಾನ್ಯವಾಗಿ ಮಹಾಮಂಡಳಿಯು ಸಂಪೂರ್ಣ ಕಾರ್ಯನೀತಿಗಳನ್ನು ರೂಪಿಸುವುದು. ಆಡಳಿತ ಮಂಡಳಿಯು ಸಂಸ್ಥೆಯ ವ್ಯವಸ್ಥಾಪನೆ ಮತ್ತು ಆಡಳಿತ ಜವಾಬ್ದಾರಿಯನ್ನು ನಿರ್ವಹಿಸುವುದು. ಈ ಮಂಡಳಿಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದು, ಕಾಲಕಾಲಕ್ಕೆ ಸರ್ಕಾರವು ಸದಸ್ಯರನ್ನು ನೇಮಕ ಮಾಡುವುದು. ಸಂಸ್ಥೆಯ ನಿರ್ದೇಶಕರು ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುತ್ತಾರೆ.ಆರ್ಥಿಕ ಸಮಿತಿ, ಟೆಂಡರ್ ಆಹ್ವಾನಿಸುವ ಸಮಿತಿ, ಟೆಂಡರ್ ಅಂಗೀಕರಿಸುವ ಸಮಿತಿ ಮತ್ತು ವಿಭಾಗೀಯ ಪದೋನ್ನತಿ ಸಮಿತಿಗಳು ಆಡಳಿತ ಮಂಡಳಿಯಿಂದ ನಿಯೋಜಿತಗೊಂಡು ಕರ್ತವ್ಯಗಳನ್ನು ನಿರ್ವಹಿಸುತ್ತವೆ.

ಸಂಸ್ಥೆಯು ಸ್ಥಾಪನೆಯಾದಾಗಿನಿಂದ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಪ್ರಗತಿ ಹೊಂದುತ್ತಾ ಬಂದಿದೆ. ಕರ್ನಾಟಕ ಸರ್ಕಾರದ ಅನುದಾನದ ಜೊತೆಗೆ ದಾನಿಗಳು, ಸಂಘ ಸಂಸ್ಥೆಗಳು ನೀಡಿದ ವಂತಿಗೆ ಹಣದಿಂದ ಯಶಸ್ವಿಯಾಗಿ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಲು ಸಹಕಾರಿಯಾಗಿದೆ.

ಸಂಸ್ಥೆಯು ವೈದ್ಯಕೀಯ, ಅರೆ-ವೈದ್ಯಕೀಯ ಸಿಬ್ಬಂದಿಗೆ ತರಬೇತಿ ನೀಡುತ್ತಿದೆ. ಮೂತ್ರಪಿಂಡ ಮತ್ತು ಮೂತ್ರಕೋಶ ಕಾಯಿಲೆಗಳ ರೋಗ ನಿರ್ಧಾರ ಚಿಕಿತ್ಸೆಗೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ.

ಮೇಲಿನ ಉದ್ದೇಶಗಳನ್ನೊಳಗೊಂಡ ಕಾರ್ಯಕ್ರಮಗಳಿಗೆ ವಿಶೇಷ ಚಿಕಿತ್ಸಾ ಸೌಲಭ್ಯಗಳಿಂದ ಪ್ರಸ್ತುತ ಸಂಸ್ಥೆಯು 160 ಹಾಸಿಗೆಗಳ ಸೌಲಭ್ಯವನ್ನು ಹೊಂದಿ, ಈ ಕೆಳಕಂಡ ವಿಭಾಗಗಳನ್ನು ಆಧುನಿಕ ತಂತ್ರಜ್ಞಾನದಲ್ಲಿ ಅಳವಡಿಸಿ ಅಭಿವೃದ್ಧಿಪಡಿಸಲಾಗಿದೆ.

ಈ ಎಲ್ಲಾ ವಿಭಾಗಗಳ ಕಾರ್ಯಚಟುವಟಿಕೆಗಳ ಬಗ್ಗೆ ವಿವರಣೆಯನ್ನು ಮುಂದಿನ ಪುಟಗಳಲ್ಲಿ ಒದಗಿಸಲಾಗಿದೆ.

02 :-

## 2017–18ರ ವಾರ್ಷಿಕ ವರದಿ:

## ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು (ಆಡಳಿತಾತ್ಮಕ)

ಈ ಸಾಲಿನಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಸಭೆ ಮತ್ತು ವಾರ್ಷಿಕ ಸಾಮಾನ್ಯ ಸಭೆಗಳು ದಿನಾಂಕ: 22.02.2018 ರಂದು ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವರಾದಸನ್ಮಾನ್ಯ ಶ್ರೀ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಆರ್ಥಿಕ ಸಮಿತಿ ಸಭೆಯು ದಿನಾಂಕ 29.09.2018 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿ ಹಲವು ಶಿಫಾರಸ್ಸುಗಳನ್ನು ಆಡಳಿತ ಮಂಡಳಿಯ ಅನುಮೋದನೆಗೆ ನೀಡಿದೆ.

**ಆರ್ಥಿಕ ಸಮಿತಿ ಕೈಗೊಂಡ ಪ್ರಮುಖ ತೀರ್ಮಾನಗಳು ಈ ಕೆಳಕಂಡಂತಿವೆ.**

i. ನೆಫ್ರೋ–ಯುರಾಲಜಿ ಸಂಸ್ಥೆಯ 2018–19ನೇ ಸಾಲಿನ ಆಯವ್ಯಯ.

ii. ಸಂಸ್ಥೆಯ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡಿತು.

iii. ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳ ಸಂಗ್ರಹಣೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಶಿಫಾರಸ್ಸು ನೀಡಿತು.

iv. ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಸಂಸ್ಥೆಯಲ್ಲಿ ಅಳವಡಿಸಿಕೊಂಡಿದ್ದು ಘಟನೋತ್ತರ ಮಂಜೂರಾತಿಗಾಗಿ ಶಿಫಾರಸ್ಸು ನೀಡಿತು.

v. ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ತಪಾಸಣೆಗಳು, ಪರೀಕ್ಷೆಗಳು ಹಾಗೂ ಶಸ್ತ್ರಚಿಕಿತ್ಸೆಗಳ ಚಿಕಿತ್ಸಾ ಶುಲ್ಕವನ್ನು ಪರಿಷ್ಕರಿಸಲು ಪ್ರಸ್ತಾಪಿಸಿರುವ ಶುಲ್ಕಗಳ ಪಟ್ಟಿಗೆ ಅನುಮೋದನೆ ನೀಡಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿತು.

vi. ಸಂಸ್ಥೆಯ 2018–2019 ನೇ ಸಾಲಿನಿಂದ ಅನ್ವಯವಾಗುವಂತೆ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡಿತು.

vii. ಸಂಸ್ಥೆಗೆ ಎನ್.ಎ.ಬಿ.ಹೆಚ್ ಪೂರ್ಣಪ್ರಮಾಣ ಪತ್ರವನ್ನು ಪಡೆಯಲು ಅವಶ್ಯಕ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲು ಅನುದಾನವನ್ನು ಬಿಡುಗಡೆಗೊಳಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡಿತು.



viii. ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಅವಶ್ಯವಿರುವ ವಿವಿಧ ಹುದ್ದೆಗಳನ್ನು ಸೃಜಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವ ಬಗ್ಗೆ.

ಎ) ಸಂಸ್ಥೆಯ ಮೈಸೂರು ಘಟಕದ ನೆಫ್ರೋಲಜಿ ವಿಭಾಗಕ್ಕೆ ಒಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಸೃಜಿಸಲು ಅನುಮೋದನೆ ನೀಡಿತು.


ಬಿ) ಸಂಸ್ಥೆಯ ಮೈಸೂರು ಘಟಕದ ಮೈಕ್ರೋಬಯಾಲಜಿ ವಿಭಾಗಕ್ಕೆ ಒಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಸೃಜಿಸಲು ಅನುಮೋದನೆ ನೀಡಿತು.

ಸಿ) ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ 05 ಸ್ವಚ್ಚತಾ ಸಿಬ್ಬಂದಿ ಹಾಗೂ 05 ಭದ್ರತಾ ಸಿಬ್ಬಂದಿ ಒಟ್ಟು 10 ಗ್ರೂಪ್ ಡಿ ಹುದ್ದೆಗಳ ಸೇವೆಯನ್ನು ಪಡೆಯಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿತು.

ಡಿ) ಹಾಲಿ ಇರುವ ಶುಶ್ರೂಷಕರ 05 ಹುದ್ದೆಗಳನ್ನು ಪದೋನ್ನತಿ ಹುದ್ದೆಗಳಾದ ಹಿರಿಯ ಶುಶ್ರೂಷಕರ ಹುದ್ದೆಗೆ ಮೇಲ್ದರ್ಜೆಗೇರಿಸಿ, ಮೇಲ್ದರ್ಜೇಗೇರಿಸುವುದರಿಂದ ಕೊರತೆಯಾಗುವ 05 ಶುಶ್ರೂಷಕರ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆಯನ್ನು ಏಕಕಡತದ ಮೂಲಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಿ, ಶಿಫಾರಸ್ಸು ನೀಡಿತು.

➢ **ವೈದ್ಯಕೀಯ ಸೌಲಭ್ಯ ಮತ್ತು ಆರೈಕೆ:**

**ಹೊರರೋಗಿ ವಿಭಾಗ:**
**ಅಂಕಿ-ಅಂಶಗಳು 2014 ರಿಂದ ಡಿಸೆಂಬರ್ 2018 ರವರೆಗೆ**




ಈ ವಿಭಾಗವು ಪ್ರತಿನಿತ್ಯ ಚಿಕಿತ್ಸೆಗಾಗಿ ಬರುವ ರೋಗಿಗಳಿಗೆ ಪರಿಣತ ವೈದ್ಯರುಗಳಿಂದ ಈ ಕೆಳಕಂಡ ಚಿಕಿತ್ಸಾ ಸೌಲಭ್ಯಗಳ ಸೇವೆಯನ್ನು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ನೀಡುತ್ತಿದೆ. ತುರ್ತು ಚಿಕಿತ್ಸೆಗೆ ಬರುವ ಹೊರರೋಗಿಗಳಿಗೆ ಮತ್ತು ಒಳರೋಗಿಗಳಿಗೆ ನಿರಂತರವಾಗಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ಸೇವೆ ಒದಗಿಸಲಾಗುತ್ತಿದೆ.

1. **ಮೂತ್ರಕೋಶ ಶಾಸ್ತ್ರ (ನೆಫ್ರೋಲಜಿ)**
2. **ಮೂತ್ರರೋಗ ಶಾಸ್ತ್ರ (ಯುರಾಲಜಿ)**

**ವಿಶೇಷ ಚಿಕಿತ್ಸಾ ಸೌಲಭ್ಯಗಳು:**

**ನೆಫ್ರೋಲಜಿ ವಿಭಾಗ:**

1. ಮೂತ್ರಪಿಂಡ ಕಸಿ ಚಿಕಿತ್ಸೆ (Renal Transplant Clinic)
   : ಪ್ರತಿ ಗುರುವಾರ ಮತ್ತು ಶುಕ್ರವಾರ
2. ಹೀಮೋಡಯಾಲಿಸಿಸ್ ಚಿಕಿತ್ಸೆ (Hemodialysis Clinic)
   : ಪ್ರತಿ ಸೋಮವಾರ ಮತ್ತು ಗುರುವಾರ
3. ಸಿಎಪಿಡಿ.ಓಪಿಡಿ (CAPD.OPD)
   : ಪ್ರತಿ ಬುಧವಾರ




**ಯುರಾಲಜಿ ವಿಭಾಗ:**

1. ಆಂಡ್ರೋಲಜಿ ಚಿಕಿತ್ಸೆ (Andrology Clinic)
   : ಪ್ರತಿ ಸೋಮವಾರ
2. ಮೂತ್ರಪಿಂಡ ಕಸಿ ಚಿಕಿತ್ಸೆ (Renal Transplant Clinic)
   : ಪ್ರತಿ ಮಂಗಳವಾರ
3. ನ್ಯೂರೋ-ಯುರಾಲಜಿ ಚಿಕಿತ್ಸೆ (Neuro-Urology Clinic)
   : ಪ್ರತಿ ಗುರುವಾರ
4. ಯುರೋ-ಆಂಕಾಲಜಿ ಚಿಕಿತ್ಸೆ (Uro-Oncology Clinic)
   : ಪ್ರತಿ ಗುರುವಾರ
5. ಮಕ್ಕಳ ಯುರಾಲಜಿ ಚಿಕಿತ್ಸೆ (Paediatric Urology Clinic)
   : ಪ್ರತಿ ಶನಿವಾರ
6. ಮಹಿಳಾ ಯುರಾಲಜಿ ಚಿಕಿತ್ಸೆ (Female Urology Clinic)
   : ಪ್ರತಿ ಶನಿವಾರ

ಹೊರರೋಗಿ ವಿಭಾಗದಲ್ಲಿ ಬರುವ ಬಡ ರೋಗಿಗಳಿಗೆ ಪ್ರಯೋಗಾಲಯ ಪರೀಕ್ಷೆಗಳು, ಕ್ಷ-ಕಿರಣ ಮತ್ತು ಸ್ಕ್ಯಾನಿಂಗ್, ಯುರೋಡೈನಾಮಿಕ್ ಚಿಕಿತ್ಸೆಗಳನ್ನು ಶೇ. 50ರಷ್ಟು ರಿಯಾಯಿತಿ ದರದಲ್ಲಿ ಹಾಗೂ ಹೆಚ್ಚಿನ ವರಮಾನದ ರೋಗಿಗಳಿಗೆ ಆಡಳಿತ ಮಂಡಳಿಯಿಂದ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿಕೊಂಡು ಚಿಕಿತ್ಸಾ ಸೌಲಭ್ಯ ನೀಡಲಾಗುತ್ತಿದೆ.

## ಒಳರೋಗಿಗಳ ವಿಭಾಗ:

**ಅಂಕಿ ಅಂಶಗಳು (ನೆಫ್ರೋಲಜಿ ಮತ್ತು ಯುರಾಲಜಿ ವಿಭಾಗ)**
**2014 ರಿಂದ ಡಿಸೆಂಬರ್ 2018 ರವರೆಗೆ**




160 ಹಾಸಿಗೆ ಸೌಲಭ್ಯವಿರುವ ಒಳರೋಗಿಗಳ ವಿಭಾಗವು ನಿರಂತರ ಕಾರ್ಯನಿರ್ವಹಿಸುತ್ತಿದ್ದು, ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ರೋಗಿಗಳಿಗೆ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುತ್ತಿದೆ ಹಾಗೂ ಹೆಚ್ಚಿನ ವರಮಾನವಿರುವ ರೋಗಿಗಳಿಗೆ ಆಡಳಿತ ಮಂಡಳಿಯಿಂದ ಅನುಮೋದಿಸಿರುವ ನೆರವು ದರದಲ್ಲಿ ಅನುಭೋಗ ಶುಲ್ಕ ಪಡೆದು ಸೇವೆ ನೀಡಲಾಗುತ್ತಿದೆ.

ಒಳರೋಗಿ ವಿಭಾಗದಲ್ಲಿ ಈ ಕೆಳಕಂಡ ವಿವಿಧ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ.

### ನೆಫ್ರೋಲಜಿ ವಿಭಾಗ:

ಅ. ಸಾಮಾನ್ಯ ವಾರ್ಡ್‌ಗಳು
ಆ. ಅರೆ–ವಿಶೇಷ ವಾರ್ಡ್‌ಗಳು
ಇ. ವಿಶೇಷ ವಾರ್ಡ್‌ಗಳು
ಈ. ತೀವ್ರ ನಿಗಾ ಘಟಕ
ಉ. ಡಯಾಲಿಸಿಸ್ ಘಟಕ

### ಯುರಾಲಜಿ ವಿಭಾಗ:

ಅ. ಸಾಮಾನ್ಯ ವಾರ್ಡ್‌ಗಳು
ಆ. ಅರೆ–ವಿಶೇಷ ವಾರ್ಡ್‌ಗಳು
ಇ. ವಿಶೇಷ ವಾರ್ಡ್‌ಗಳು
ಈ ಯುರೋಡೈನಾಮಿಕ್ ಘಟಕ
ಉ. ಇ.ಎಸ್.ಡಬ್ಲ್ಯೂ.ಎಲ್ ಘಟಕ
ಊ. ಕಿಡ್ನಿ ಕಸಿ ಘಟಕ
ಋ. ದೊಡ್ಡ ಶಸ್ತ್ರಚಿಕಿತ್ಸಾ ಘಟಕ
ಎ. ಚಿಕ್ಕ ಶಸ್ತ್ರಚಿಕಿತ್ಸಾ ಘಟಕ



## ಅರವಳಿಕೆ ಶಾಸ್ತ್ರ ವಿಭಾಗ:

### ರೋಗನಿರ್ಧಾರ ವಿಭಾಗ:

ಅ. **ಪ್ರಯೋಗಶಾಲಾ ಸೇವೆಗಳು** - Laboratory Services
- ❖ ರೋಗಲಕ್ಷಣ ಶಾಸ್ತ್ರ - Pathology
- ❖ ಜೀವ ರಸಾಯನ ಶಾಸ್ತ್ರ - Bio-Chemistry
- ❖ ಮಿಣಿ ಜೀವ ಶಾಸ್ತ್ರ - Micro-Biology
- • ಹಿಸ್ಟೋಪೆಥಾಲಜಿ - Histopathology
- • ಹೆಮಾಟಾಲಜಿ - Hematology
- • ಸೈಟಾಲಜಿ - Cytology
- • ಸಿರಾಲಜಿ - Serology
- • ಬ್ಯಾಕ್ಟೀರಿಯಾಲಜಿ - Bacteriology

ಆ. ಕ್ಷ–ಕಿರಣ - Radiology
ಇ. ಅಲ್ಟ್ರಾಸೋನಾಲಜಿ - Ultrasonology
ಈ. ಕೇಂದ್ರ ಸ್ಟೆರೈಲ್ ಸರಬರಾಜು ವಿಭಾಗ - C.S.S.D
ಉ. ಕೇಂದ್ರೀಯ ಆಕ್ಸಿಜನ್ ಮತ್ತು ಸಕ್ಷನ್ ಸರಬರಾಜು ವ್ಯವಸ್ಥೆ - Central Oxygen & Suction
ಊ.ರಕ್ತನಿಧಿ - Blood Bank

ಅ. **ಸಾಮಾನ್ಯ ವಾರ್ಡ್‌ಗಳು :**

ಈ ವಾರ್ಡ್‌ಗಳಲ್ಲಿ ಮೂತ್ರಪಿಂಡ ಮತ್ತು ಮೂತ್ರಕೋಶಕ್ಕೆ ಸಂಬಂಧಿಸಿದ ಕಾಯಿಲೆ ಹೊಂದಿರುವ ಎಲ್ಲಾ ಬಗೆಯ ರೋಗಿಗಳನ್ನು ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಆ. **ಅರೆ–ವಿಶೇಷ ವಾರ್ಡ್‌ಗಳು :**

ರೂ. 300/–ಗಳ 07 ವಾರ್ಡ್‌ಗಳಿದ್ದು ಹೆಚ್ಚಿನ ವರಮಾನವಿರುವ ರೋಗಿಗಳ ಕೋರಿಕೆಯ ಮೇರೆಗೆ ಈ ವಾರ್ಡ್‌ಗಳಲ್ಲಿ ಚಿಕಿತ್ಸಾ ಸೌಲಭ್ಯ ಒದಗಿಸಲಾಗುತ್ತಿದೆ. ಈ ವಾರ್ಡ್‌ಗಳಲ್ಲಿ ಎಲ್ಲ ಬಗೆಯ ರೋಗಿಗಳನ್ನು ದಾಖಲಿಸಲಾಗುತ್ತಿದೆ.

ಇ. **ವಿಶೇಷ ವಾರ್ಡ್‌ಗಳು :**

ರೂ. 750/–ಗಳ 08 ವಾರ್ಡ್‌ಗಳಿದ್ದು ಹೆಚ್ಚಿನ ವರಮಾನವಿರುವ ರೋಗಿಗಳ ಕೋರಿಕೆಯ ಮೇರೆಗೆ ಈ ವಾರ್ಡ್‌ಗಳಲ್ಲಿ ಚಿಕಿತ್ಸಾ ಸೌಲಭ್ಯ ಒದಗಿಸಲಾಗುತ್ತಿದೆ. ಈ ವಾರ್ಡ್‌ಗಳಲ್ಲಿ ಎಲ್ಲಾ ಬಗೆಯ ರೋಗಿಗಳನ್ನು ದಾಖಲಿಸಲಾಗುತ್ತಿದೆ.

ಈ. **ತೀವ್ರ ನಿಗಾ ಘಟಕ (I.C.U.):**


ಸಂಪೂರ್ಣ ಹವಾನಿಯಂತ್ರಿತ ತೀವ್ರ ನಿಗಾ ಘಟಕದಲ್ಲಿ 8 ಹಾಸಿಗೆಗಳಿದ್ದು ಹಾಗೂ ಸಂದಿಗ್ಧ ಮೂತ್ರಪಿಂಡ ಮತ್ತು ಮೂತ್ರರೋಗ ಖಾಯಿಲೆಗಳಿಂದ ನರಳುವ ರೋಗಿಗಳಿಗೆ ಆಧುನಿಕ ಉಪಕರಣಗಳಾದ ವಾಲ್ಯೂಮ್ ಸೈಕಲ್ಡ್ ವೆಂಟಿಲೇಟರ್, ಮಲ್ಟಿ ಸಿಸ್ಟಮ್ ಮಾನಿಟರ್ಸ್, ಡಿಫಿಬ್ರಿಲೇಟರ್, ಇನ್‌ಫ್ಯೂಷನ್ ಪಂಪ್ಸ್, ರಿಸಿಸ್ಟೇಷನ್ ಸಲಕರಣೆಗಳು, ಸೆಂಟ್ರಲೈಸ್ಡ್ ವಾಕ್ಯೂಮ್, ಆಕ್ಸಿಜನ್ ಮತ್ತು ತುರ್ತು ಚಿಕಿತ್ಸಾ ಔಷಧ ಸೌಲಭ್ಯಗಳೊಂದಿಗೆ ನಿರಂತರವಾಗಿ ಅಗತ್ಯ ಸಿಬ್ಬಂದಿಯಿಂದ ಸಜ್ಜುಗೊಳಿಸಿ ಸೇವಾ ನಿರ್ವಹಣೆಯನ್ನು ನೀಡಲಾಗುತ್ತಿದೆ. ಈ ಘಟಕದಲ್ಲಿ ಚಿಕಿತ್ಸೆಯನ್ನು ನೀಡಿ ಸುಧಾರಿಸಿಕೊಂಡ ರೋಗಿಗಳನ್ನು ಸಾಮಾನ್ಯ ವಾರ್ಡುಗಳಿಗೆ ಮುಂದಿನ ಚಿಕಿತ್ಸಾ ನಿರ್ವಹಣೆಗಾಗಿ ಕಳುಹಿಸಲಾಗುತ್ತಿದೆ.

ಜೀವರಕ್ಷಕ ಉಪಕರಣಗಳನ್ನು ಜೋಡಿಸಿ ಘಟಕವನ್ನು ಬಲಪಡಿಸಲಾಗಿದೆ. ರಾಜ್ಯದ ವಿವಿಧ ಆರೋಗ್ಯ ಕೇಂದ್ರಗಳಿಂದ ಮುಂದಿನ ಸೂಕ್ತ ತಪಾಸಣೆಗೆ ಬಂದು ದಾಖಲಾಗುವ ರೋಗಿಗಳು ಹೆಚ್ಚಾಗಿದ್ದು, ಇಲ್ಲಿಗೆ ಬರುವ ಹೆಚ್ಚಿನ ರೋಗಿಗಳು ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ, ಮೂತ್ರಕೋಶ, ಡಯಾಲಿಸಿಸ್, ಹೃದಯ, ಉಸಿರಾಟ, ಪಿತ್ತಜನಕಾಂಗದ ಶಸ್ತ್ರಚಿಕಿತ್ಸೆ ಸಮಸ್ಯೆಗಳಿಗೆ ದಾಖಲಾಗುತ್ತಿದ್ದಾರೆ. ಈ ಘಟಕದಲ್ಲಿ ವಿಷಸೇವನೆ ಮತ್ತು ಹಾವು ಕಡಿತ ಸೇರಿದಂತೆ, ಅಗತ್ಯವಾದ ಡಯಾಲಿಸಿಸ್ ಪೂರೈಕೆ ಹಾಗೂ ಜೀವರಕ್ಷಕ ಔಷಧಿಗಳು ಸಹ ಲಭ್ಯವಿರುತ್ತದೆ.



## ಅ. ಡಯಾಲಿಸಿಸ್ ಘಟಕ (Dialysis):

**ಅಂಕಿ–ಅಂಶಗಳು 2014 ರಿಂದ ಡಿಸೆಂಬರ್ 2018 ರವರೆಗೆ**




ಸಂಸ್ಥೆಯಲ್ಲಿ ಮೂತ್ರಪಿಂಡ ವೈಫಲ್ಯವಿರುವ ರೋಗಿಗಳ ಚಿಕಿತ್ಸೆಗಾಗಿ 25 ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಲಾಗಿದೆ. ಡಯಾಲಿಸಿಸ್ ಘಟಕವು ಸಂಪೂರ್ಣ ಹವಾ ನಿಯಂತ್ರಿತ ವ್ಯವಸ್ಥೆ ಹೊಂದಿದ್ದು ಉತ್ತಮವಾದ ಆರ್.ಓ. ವಾಟರ್‌ಪ್ಲಾಂಟ್‌ನಿಂದ ತನ್ನ ಕಾರ್ಯಚಟುವಟಿಕೆಯನ್ನು ನಿರ್ವಹಿಸುತ್ತಿದೆ. ಹಾವು ಕಡಿತ, ವಿಷ ಸೇವನೆ ಅಥವಾ ಓವರ್ ಡೋಸ್‌ನಿಂದ ಬಳಲುವ ರೋಗಿಗಳ ದೇಹದ ರಕ್ತ ಸಂಚಲನೆಯಿಂದ ಔಷಧವನ್ನು ಶೀಘ್ರದಲ್ಲಿ ತೆಗೆದುಹಾಕಲು ಹಾಗೂ ತೀವ್ರ ತರಹದ ಮೂತ್ರಪಿಂಡ ವೈಫಲ್ಯವಿರುವ, ಅಂತಿಮ ಹಂತದ ಮೂತ್ರಪಿಂಡ ವೈಫಲ್ಯವಿರುವ, ಹೆಚ್‌ಬಿಎಸ್‌ಎಜಿ ಪಾಸಿಟಿವ್, ಹೆಚ್‌ಐವಿ ಪಾಸಿಟಿವ್, ಹೆಚ್‌ಸಿವಿ ಪಾಸಿಟಿವ್, ರೋಗಿಗಳ ಚಿಕಿತ್ಸೆಗೆ ಔಷಧ ಸೌಲಭ್ಯಗಳೊಂದಿಗೆ ಪ್ರತಿದಿನ ಮೂರು ಪಾಳಿಯಲ್ಲಿ ನುರಿತ ಸಿಬ್ಬಂದಿಯಿಂದ ಸಜ್ಜುಗೊಳಿಸಿ ಸೇವಾ ನಿರ್ವಹಣೆಯನ್ನು ನೀಡಲಾಗುತ್ತಿದೆ. ಈ ಘಟಕದಲ್ಲಿ ಚಿಕಿತ್ಸೆಯನ್ನು ನೀಡಿ ಸುಧಾರಿಸಿಕೊಂಡ ರೋಗಿಗಳನ್ನು ಸಾಮಾನ್ಯ ವಾರ್ಡುಗಳಿಗೆ ಮುಂದಿನ ಚಿಕಿತ್ಸಾ ನಿರ್ವಹಣೆಗಾಗಿ ಕಳುಹಿಸಲಾಗುತ್ತದೆ.

1. **ಶಸ್ತ್ರಚಿಕಿತ್ಸಾ ಕೊಠಡಿಗಳು :**

ಸುಸಜ್ಜಿತವಾದ ಆಧುನಿಕ ಆಪರೇಷನ್ ಥಿಯೇಟರ್‌ಗಳ ಸಮುಚ್ಚಯವಿದ್ದು ಇದರಲ್ಲಿ ಪ್ರೀ–ಅನೆಸ್ತೇಷಿಯಾ, ಫ್ಲಾಷ್ ಸ್ಟೆರಿಲೈಜೇಷನ್, ಪೋಸ್ಟ್ ಆಪರೇಟಿವ್ ರಿಕವರಿ ಮುಂತಾದ ಸೌಲಭ್ಯವಿರುವ 4 ಆಪರೇಷನ್ ಥಿಯೇಟರ್‌ಗಳಿವೆ. ಆಪರೇಷನ್ ಥಿಯೇಟರ್‌ಗಳಲ್ಲಿ ಆಧುನಿಕ ಶಸ್ತ್ರಚಿಕಿತ್ಸಾ ಟೇಬಲ್, ಲೈಟ್, ಇನ್‌ವೇಸಿವ್ ಬ್ಲಡ್ ಪ್ರೆಷರ್ ಮಾನಿಟರಿಂಗ್ ಮತ್ತು ಟೈಡಲ್ ಕಾರ್ಬನ್ ಡೈ–ಆಕ್ಸೈಡ್ ಎಸ್ಟಿಮೇಷನ್‌ಗಳಿಂದ ಸುಸಜ್ಜಿತಗೊಂಡಿದೆ. ಪೀಡಿಯಾಟ್ರಿಕ್ ಸಿಸ್ಟೋಸ್ಕೋಪಿ ಮತ್ತು ಲ್ಯಾಪ್ರೋಸ್ಕೋಪಿಕ್‌ನಂತಹ ಕಾರ್ಯ ವಿಧಾನಗಳು ಲಭ್ಯವಿದೆ. ಶಸ್ತ್ರಚಿಕಿತ್ಸಾ ಸಂಕೀರ್ಣ ಮತ್ತು ಎನ್.ಐ.ಸಿ.ಯು ಮತ್ತು ಪಿ.ಐ.ಸಿ.ಯುಗಾಗಿ ಸಹ ಸೆಂಟ್ರಲ್ ಆಕ್ಸಿಜನ್ ಮತ್ತು ವಾಕ್ಯೂಮ್ ಸೌಲಭ್ಯವೂ ಲಭ್ಯವಿದೆ.

ಈ. ಯುರೋಡೈನಾಮಿಕ್ ಚಿಕಿತ್ಸೆ (Urodynamic):

ಈ ಘಟಕವು ಸುಸಜ್ಜಿತವಾದ ಆಧುನಿಕ ಉಪಕರಣಗಳಿಂದ ಸಜ್ಜುಗೊಂಡಿದೆ. ಅಗತ್ಯ ಸಿಬ್ಬಂದಿಯಿಂದ ಮೂತ್ರಜನಕಾಂಗ ಕಾಯಿಲೆಯಾದ Bladder Dysfunction ಗೆ ಸಂಬಂಧಿಸಿದಂತೆ ಚಿಕಿತ್ಸೆ ನೀಡಲಾಗುತ್ತಿದೆ. 2017– 18ನೇ ಸಾಲಿನಲ್ಲಿ ಒಟ್ಟು 814 ಯುರೋಡೈನಾಮಿಕ್ ಚಿಕಿತ್ಸೆ ನೀಡಲಾಗಿದೆ.

**ಉ.ಮೂತ್ರಪಿಂಡ ಕಲ್ಲುಪುಡಿ ಯಂತ್ರದ ಘಟಕ :**

**(Extra Corporeal Shockwave Lithotripsy):**

**ಅಂಕಿಅಂಶಗಳು 2014 ರಿಂದ ಡಿಸೆಂಬರ್ 2018 ರವರೆಗೆ**




ಸಂಸ್ಥೆಯಲ್ಲಿ ಈ ಘಟಕವು 18.11.2009 ರಿಂದ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ಘಟಕದಲ್ಲಿ Dornier Compact Delta-II ಮಾದರಿಯ ಉಪಕರಣದ ಜೊತೆಗೆ ಶಸ್ತ್ರಚಿಕಿತ್ಸೆ ಇಲ್ಲದೇ ಮೂತ್ರಪಿಂಡದಲ್ಲಿನ ಕಲ್ಲುಗಳನ್ನು ಪುಡಿ ಮಾಡಲು ಅಲ್ಟ್ರಾಸೌಂಡ್ ಮತ್ತು ಫ್ಲೂರೋಸ್ಕೋಪಿ ಒಳಗೊಂಡ ಸುಸಜ್ಜಿತ ಉಪಕರಣವನ್ನು ಅಳವಡಿಸಲಾಗಿದೆ. ನುರಿತ ಸಿಬ್ಬಂದಿಯಿಂದ ದಿನವಹಿ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಸೇವಾ ನಿರ್ವಹಣೆಯನ್ನು ಮಾಡಲಾಗುತ್ತಿದೆ. ಈ ಘಟಕದಲ್ಲಿ 2017–18ನೇ ಸಾಲಿನಲ್ಲಿ ಒಟ್ಟು 467 ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

**ಊ. ಕಿಡ್ನಿ ಕಸಿ ಚಿಕಿತ್ಸೆ:**

ಸಂಸ್ಥೆಯಲ್ಲಿ ಬದಲಿ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಯನ್ನು ದಿನಾಂಕ: 06.04.2009 ರಿಂದ ಪ್ರಾರಂಭಿಸಲಾಗಿದ್ದು, ನುರಿತ ವೈದ್ಯರಿಂದ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಗಿದ್ದು, ವಿವರ ಕೆಳಕಂಡಂತಿದೆ :

**1. ಜೀವಂತ ಕಿಡ್ನಿ ಕಸಿ**

(Live Related Renal Transplantation) : 143

**2. ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯಿಂದ ಪಡೆದ ಕಿಡ್ನಿ ಕಸಿ**

(Cadaveric Renal Transplantation) : 40

ಒಟ್ಟು 183 ಕಿಡ್ನಿ ಕಸಿಯನ್ನು ನುರಿತ ವೈದ್ಯರಿಂದ ಯಶಸ್ವಿಯಾಗಿ ನಡೆಸಲಾಗಿದೆ.



**ಋ. ಶಸ್ತ್ರಚಿಕಿತ್ಸೆಗಳು (Operation):**

ಮೂತ್ರರೋಗಕ್ಕೆ ಸಂಬಂಧಿಸಿದ ಹಲವು ರೋಗಗಳಾದ ಮೂತ್ರಜನಕಾಂಗದ ವಿಫಲತೆ, ಮೂತ್ರಜನಕಾಂಗದ ಕಲ್ಲಿನ ಕಾಯಿಲೆ, ಪ್ರಾಸ್ಟೇಟ್, ಮೂತ್ರಪಿಂಡ ಮತ್ತು ಮೂತ್ರಕೋಶದ ಕ್ಯಾನ್ಸರ್, ಪುರುಷ ನಪುಂಸಕತೆ, ಹಾಗೂ ಸಂತಾನಹೀನತೆ ಇತ್ಯಾದಿ ರೋಗಗಳಿಂದ ಬಳಲುವ ರೋಗಿಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದ್ದು, ಸಮಾಜದ ದುರ್ಬಲ ಹಾಗೂ ಬಡಜನತೆಗೆ ಮೂತ್ರಕೋಶದ ಕಾಯಿಲೆಗಳನ್ನು ಗುಣಪಡಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ ಒಟ್ಟು 3171 ದೊಡ್ಡ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ.

ಮೂತ್ರರೋಗ ಮತ್ತು ಮೂತ್ರಪಿಂಡಕ್ಕೆ ಸಂಬಂಧಿಸಿದಂತೆ ಸಮಾಜದ ದುರ್ಬಲ ಹಾಗೂ ಬಡಜನತೆಯ ಕಾಯಿಲೆಗಳನ್ನು ಗುಣಪಡಿಸಲಾಗುತ್ತಿದೆ. ಸಣ್ಣ ಶಸ್ತ್ರಚಿಕಿತ್ಸೆಗಳಾದ ಸಿಸ್ಟೋಸ್ಕೋಪಿ, ಸರ್‌ಕಮ್ಸಿಶನ್, ಡೈಲೆಟೇಷನ್, ಟ್ರೋಕರ್ ಎಸ್.ಪಿ.ಸಿ, ಪ್ರಾಸ್ಟೇಟ್ ಬಯಾಪ್ಸಿ, ಎ.ವಿ. ಫಿಸ್ತುಲಾ, ಸ್ಟೆಂಟ್ ರಿಮೂವಲ್ ಗಳನ್ನು ಮಾಡಲಾಗಿದ್ದು, 2017–18ನೇ ಸಾಲಿನಲ್ಲಿ ಒಟ್ಟು 8973 ಸಣ್ಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

2014 ರಿಂದ ಡಿಸೆಂಬರ್2018ರವರೆಗಿನ ಶಸ್ತ್ರಚಿಕಿತ್ಸೆಯ ಅಂಕಿ–ಅಂಶಗಳ ವಿವರ :

| | | |
|---|---|---|
| 1. ದೊಡ್ಡ ಶಸ್ತ್ರಚಿಕಿತ್ಸೆಗಳು (Major Operation) | – | 3171 |
| 2. ಚಿಕ್ಕ ಶಸ್ತ್ರಚಿಕಿತ್ಸೆಗಳು (Minor Operation) | – | 8973 |
| ಒಟ್ಟು | – | 12144 |

**2. ಅರವಳಿಕೆ ಶಾಸ್ತ್ರ ವಿಭಾಗ:**

ಯುರಾಲಜಿ ಮತ್ತು ನೆಫ್ರೋಲಜಿ ಶಸ್ತ್ರಚಿಕಿತ್ಸೆ ನೆರವೇರಿಸುವಾಗ ಅರವಳಿಕೆ ನೀಡುವುದು ತುಂಬಾ ಕ್ಲಿಷ್ಟಕರ. ಸಣ್ಣ ಸಣ್ಣ ಶಸ್ತ್ರಚಿಕಿತ್ಸೆಗಳಿಂದ ಹಿಡಿದು ದೊಡ್ಡ ಪ್ರಮಾಣದ ಶಸ್ತ್ರಚಿಕಿತ್ಸೆಗಳು ಹಾಗೂ ಆಧುನಿಕ ಕೀಹೋಲ್ ಸರ್ಜರಿಗಳಾದ ಲ್ಯಾಪ್ರೋಸ್ಕೋಪಿ ಸರ್ಜರಿ ನೆರವೇರಿಸುವಾಗ ನುರಿತ ತಜ್ಞರಿಂದ ಅರವಳಿಕೆ ನೀಡಲಾಗುತ್ತಿದೆ.

**3. ರೋಗನಿರ್ಧಾರ ವಿಭಾಗ (ಡಯಾಗ್ನೋಸ್ಟಿಕ್):**

**ಅ) ಪ್ರಯೋಗಶಾಲಾ ಸೇವೆಗಳು:**

ಸಂಸ್ಥೆಯಲ್ಲಿ ದಿನಾಂಕ : 07.11.2016 ರಿಂದ ಅನ್ವಯವಾಗುವಂತೆ ದಿನದ 24 ಗಂಟೆಗಳ ಕಾಲ ಪಾಳಿಗಳಲ್ಲಿ ಪ್ರಯೋಗಶಾಲಾ ಸೇವೆಯನ್ನು ನೀಡಲಾಗುತ್ತಿದೆ.

❖ **ಬಯೋ–ಕೆಮಿಸ್ಟ್ರಿ ವಿಭಾಗ:**

ಈ ವಿಭಾಗದಲ್ಲಿ ಗ್ಲೂಕೋಸ್, ಯೂರಿಯ, ಕ್ರಿಯಾಟಿನಿನ್, ಸೋಡಿಯಂ, ಪೊಟ್ಯಾಷಿಯಂ, ಕ್ಲೋರೈಡ್, 24 ಗಂಟೆಗಳ ಯೂರಿನರಿ ಪ್ರೋಟೀನ್, ಪಿಎಸ್ಎ (ಎಲಿಸಾ), ಟಿ3, ಟಿ4, ಟಿಎಸ್‌ಹೆಚ್, ಸ್ಟೋನ್ ಅನಾಲಿಸಿಸ್ ಪರೀಕ್ಷೆಗಳನ್ನು ಮಾಡಲಾಗುತ್ತಿದೆ. ಆಧುನಿಕ ತಂತ್ರಜ್ಞಾನದ ಸೆಮಿ–ಆಟೋ ಅನಲೈಸರ್, ಎಲೆಕ್ಟ್ರೋಲೈಟ್ ಅನಲೈಜರ್, ಬ್ಲಡ್ ಗ್ಯಾಸ್ ಅನಲೈಸರ್, ಎಲೆಕ್ಟ್ರೋಫ್ಲೋರೆಸಿಸ್ ಡೆನ್ಸಿಟೊಮೆಟ್ರಿ ಸೆಮಿ–ಆಟೋಮೆಟೆಡ್, ಎಲೈಜಾ ರೀಡರ್ ಮುಂತಾದ ಉಪಕರಣಗಳನ್ನು ಉಪಯೋಗಿಸಿಕೊಂಡು ರಕ್ತವನ್ನು ಸಾಮಾನ್ಯ ಹಾಗೂ ವಿಶೇಷ ರಾಸಾಯನಿಕ ಪರೀಕ್ಷೆಗೊಳಪಡಿಸಿ ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಲಾಗುವುದು. ಡಯಾಬಿಟಿಸ್ ಇನ್ಸಿಪಿಡಸ್, ರೀನಲ್ ಟ್ಯುಬುಲಾರ್ ಅಸಿಡೋಸಿಸ್, ಸ್ಕ್ರೀನಿಂಗ್ ಫಾರ್ ಇನ್‌ಬಾರ್ನ್ ಎರರ್ಸ್ ಆಫ್ ಮೆಟಬಾಲಿಸಮ್ ಹಾಗೂ ಕಲ್ಲು ಪರೀಕ್ಷೆಗಳನ್ನು ಮಾಡಲು ಸೌಲಭ್ಯವನ್ನು ಒದಗಿಸಲಾಗಿದೆ. ಗುಣಮಟ್ಟವನ್ನು ಕಾಪಾಡಲು ಆಂತರಿಕ ಗುಣಮಟ್ಟದ ನಿಯಂತ್ರಣ ವ್ಯವಸ್ಥೆಯನ್ನು ಪ್ರತಿನಿತ್ಯ ಜರುಗಿಸಲಾಗುತ್ತಿದೆ.

❖ **ಮೈಕ್ರೋಬಯಾಲಜಿ ವಿಭಾಗ :** ಈ ವಿಭಾಗದಲ್ಲಿ ವಿವಿಧ ರೀತಿಯ ರಕ್ತ, ಸ್ಪುಟಂ ಮತ್ತು ಸಿಎಸ್‌ಎಫ್, ಇತ್ಯಾದಿ ಮಾದರಿಗಳಲ್ಲಿ ಕಾರಣೀಭೂತವಾದ ಕ್ರಿಮಿಗಳನ್ನು ಸ್ವಯಂ ಸಿದ್ಧಪಡಿಸಲಾದ ಕಲ್ಚರ್ ಮೀಡಿಯಾದಲ್ಲಿ ಬೆಳೆಸಿ ಅವುಗಳ ಆಂಟಿಬಯೋಟಿಕ್ ಸೆನ್ಸಿಟಿವಿಟಿ ಪ್ಯಾಟ್ರನ್‌ನ್ನು ಗುರ್ತಿಸಿ ಮುಂದಿನ ಚಿಕಿತ್ಸೆಗೆ ಅನುವು ಮಾಡಕೊಡಲಾಗುತ್ತದೆ. ಆಸ್ಪತ್ರೆಯಲ್ಲಿ ತಗಲುವ ನಂಜು ಪ್ರತಿರೋಧಕ ನಿಯಂತ್ರಣ ಚಟುವಟಿಕೆಗಳನ್ನು ಜರುಗಿಸಲಾಗುತ್ತಿದೆ.

❖ **ಹೆಮಟಾಲಜಿ ವಿಭಾಗ:** ಈ ವಿಭಾಗದಲ್ಲಿ ಹೆಚ್‌ಬಿ, ಟಿಸಿ, ಡಿಸಿ, ಇಎಸ್‌ಆರ್, ಪಿಎಲ್‌ಟಿ, ಪಿಸಿವಿ, ಸಿಬಿಸಿ, ಎಚ್.ಗ್ರಾಂ, ಬ್ಲಡ್ ಗ್ರೂಪಿಂಗ್, ಬಿಟಿ, ಸಿಟಿ, ಪರೀಕ್ಷೆ ಮಾಡಲಾಗುತ್ತಿದ್ದು, ಪೌಷ್ಟಿಕ ಆಹಾರದ ಕೊರತೆ, ಕಬ್ಬಿಣ ಅಂಶದ ಕೊರತೆ, ವಿಟಮಿನ್ ಕೊರತೆಗಳ ನ್ಯೂನತೆಯ ಬಗ್ಗೆ ತಿಳಿಯುವ ವಿಧಾನವನ್ನೂ ಸಹ ಮಾಡಲಾಗುತ್ತಿದೆ.

❖ **ಸೈಟಾಲಜಿ ವಿಭಾಗ:** ಈ ವಿಭಾಗದಲ್ಲಿ ಯೂರಿನ್ ಸೈಟಾಲಜಿ ಪರೀಕ್ಷೆಯನ್ನು ಮಾಡಲಾಗುತ್ತಿದೆ.


❖ **ಹಿಸ್ಟೋಪೆಥಾಲಜಿ ವಿಭಾಗ:** ಈ ವಿಭಾಗದಲ್ಲಿ ಮೂತ್ರಪಿಂಡ ಮತ್ತು ಮೂತ್ರಕೋಶಕ್ಕೆ ಸಂಬಂಧಿಸಿದಂತೆ ಬಯಾಪ್ಸಿ ಪರೀಕ್ಷೆಯನ್ನು ಮಾಡಲಾಗುತ್ತಿದೆ.

❖ **ಸಿರಾಲಜಿ ವಿಭಾಗ:** ಈ ವಿಭಾಗಕ್ಕೆ ಸಂಬಂಧಿಸಿದ ಕಾರ್ಯಾತ್ಮಕ ಪರೀಕ್ಷೆಗಳಾದ ಆರ್‌ಎ, ಎಎಸ್‌ಎಲ್‌ಒ, ಸಿಆರ್‌ಪಿ, ವಿಡಿಆರ್‌ಎಲ್, ಹೆಚ್‌ಐವಿ, ಹೆಚ್‌ಬಿಎಸ್‌ಎಜಿ, ಹೆಚ್‌ಸಿವಿ, ಎಎನ್‌ಸಿಎ ಗಳನ್ನು ಪ್ರಮಾಣಾತ್ಮಕ ಮತ್ತು ಪರಿಮಾಣಾತ್ಮಕವಾಗಿ ಪರೀಕ್ಷೆ ಮಾಡಲಾಗುತ್ತಿದೆ.

❖ **ಬ್ಯಾಕ್ಟೀರಿಯಾಲಜಿ ವಿಭಾಗ:** ಈ ವಿಭಾಗಕ್ಕೆ ಸಂಬಂಧಿಸಿದ ಕಾರ್ಯಾತ್ಮಕ ಪರೀಕ್ಷೆಗಳಾದ ಯೂರಿನ್, ಬ್ಲಡ್ ಗ್ರೂಪ್, ಬಾಡಿ ಫ್ಲೂಯ್ಡ್ಸ್, ಸ್ಪುಟಮ್, ಪಿವಿಎಸ್, ಸೆಮನ್, ಡೈರೆಕ್ಟ್ ಸ್ಮಿಯರ್ಸ್ ಪರೀಕ್ಷೆಗಳನ್ನು ಪ್ರಮಾಣಾತ್ಮಕ ಮತ್ತು ಪರಿಮಾಣಾತ್ಮಕವಾಗಿ ಮಾಡಲಾಗುತ್ತಿದೆ.



**ಆ. ರೇಡಿಯಾಲಜಿ ವಿಭಾಗ:**
**ಅಂಕಿಅಂಶಗಳು 2014 ರಿಂದ ಡಿಸೆಂಬರ್ 2018 ರವರೆಗೆ**




ಸಂಸ್ಥೆಯಲ್ಲಿ ರೇಡಿಯಾಲಜಿ ವಿಭಾಗವು ಡಯಾಗ್ನೋಸ್ಟಿಕ್ ಸೇವೆಗಳಿಗೆ ಸಜ್ಜಾಗಿದ್ದು, ಈ ವಿಭಾಗವು 200 ಎಂ.ಎ.ಮಾದರಿಯ ಕ್ಷ–ಕಿರಣ ಘಟಕ, ಫ್ಲೋರೋಸ್ಕೋಪಿ ಘಟಕ ಹಾಗೂ ಬೆಡ್‌ಸೈಡ್ ರೇಡಿಯೋಗ್ರಾಫ್ಸ್ ಗಾಗಿ 60 ಎಂ.ಎ.ಮೊಬೈಲ್ ಉಪಕರಣವನ್ನು ಹೊಂದಿದೆ ಮತ್ತು ನೂತನ ತಂತ್ರಜ್ಞಾನದಿಂದ ಎಕ್ಸರೇ ಫಿಲ್ಮ್ ಅಭಿವೃದ್ಧಿಗೊಳಿಸಲಾಗುತ್ತಿದೆ. ಐವಿಪಿ, ಕೆಯುಬಿ, ಎಕ್ಸ್‌ರೇ, ಆರ್‌ಜಿಯು, ಎಂಸಿಯು, ಚೆಸ್ಟ್ ಎಕ್ಸ್‌ರೇ, ಅಲ್ಟ್ರಾಸೌಂಡ್ ಪರೀಕ್ಷೆಗಳಿಗಾಗಿ ನುರಿತ ಸಿಬ್ಬಂದಿಯಿಂದ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಸೇವಾ ನಿರ್ವಹಣೆಯನ್ನು ಮಾಡಲಾಗುತ್ತಿದೆ. 2017–18ನೇ ವರ್ಷದಲ್ಲಿ ಒಟ್ಟು 33488 ರೇಡಿಯಾಲಜಿ ಪರೀಕ್ಷೆ ಮಾಡಲಾಗಿದೆ.

**ಇ. ಅಲ್ಟ್ರಾಸೋನಾಲಜಿ :**

ಡಿಜಿಟಲ್ ಕಲರ್ ಡಾಪ್ಲರ್ ಅಲ್ಟ್ರಾಸೌಂಡ್ ಉಪಕರಣ ಲಭ್ಯವಿದ್ದು, ಜನರಲ್ ಪೀಡಿಯಾಟ್ರಿಕ್ಸ್, ಕಾರ್ಡಿಯಾಕ್, ಇಂಟ್ರಾಕ್ಯಾವಿಟಿ, ದೇಹದ ಚಿಕ್ಕ ಭಾಗಗಳು, ವಾಸ್ಕ್ಯೂಲರ್ ಮತ್ತು ಟ್ರಾನ್ಸ್‌ಕ್ರೆನಿಯರ್ ಅಧ್ಯಯನಗಳಿಂದ ರೋಗ ಪತ್ತೆ ಹಚ್ಚಲಾಗುವುದು.

**ಈ. ಕೇಂದ್ರ ಸ್ಟೆರೈಲ್ ಸರಬರಾಜು ವಿಭಾಗ (ಸಿಎಸ್‌ಎಸ್‌ಡಿ) :**

ಕೇಂದ್ರ ಸ್ಟೆರೈಲ್ ಸರಬರಾಜು ವಿಭಾಗವು ಈ ಸಂಸ್ಥೆಯ ಮೆಡಿಕಲ್ ಮತ್ತು ಸರ್ಜಿಕಲ್ ವಾರ್ಡ್‌ಗಳಿಗೆ ಅಗತ್ಯವಾಗಿದ್ದು, ನೂತನ ಸಾಧನ ಸಲಕರಣೆಗಳೊಂದಿಗೆ ಸಜ್ಜುಗೊಂಡಿದೆ. ಸದರಿ ವಿಭಾಗದಲ್ಲಿ ಶಸ್ತ್ರಚಿಕಿತ್ಸೆಗೆ ಬಳಸುವ ಸಲಕರಣೆಗಳನ್ನು ಕಡ್ಡಾಯವಾಗಿ ಸ್ಟೆರಿಲೈಜ್ ಮಾಡಲಾಗುವುದು.ಸ್ಟೆರಿಲೈಸ್ ಡ್ರೆಸಿಂಗ್‌ನ್ನು ಪ್ರಯೋಗಶಾಲಾ ಬಳಕೆಯ ಶೋಧಿತ ನೀರಿನ ಸಿದ್ಧತೆಯ ಜೊತೆಗೆ ಹೆಚ್ಚುವರಿಯಾಗಿ ಸಿದ್ಧಪಡಿಸಲಾಗಿದೆ.

### ಉ. ಕೇಂದ್ರೀಯ ಆಕ್ಸಿಜನ್ ಮತ್ತು ಸಕ್ಷನ್ ಸರಬರಾಜು ವ್ಯವಸ್ಥೆ :

ಸಂಸ್ಥೆಯಲ್ಲಿ ತುರ್ತು ಚಿಕಿತ್ಸೆ, ತೀವ್ರ ನಿಗಾ ಘಟಕಗಳು, ಶಸ್ತ್ರಚಿಕಿತ್ಸಾಲಯಗಳು ಹಾಗೂ ರಿಕವರಿ ವಾರ್ಡುಗಳಿಗೆ ಆಕ್ಸಿಜನ್ ಮತ್ತು ಸಕ್ಷನ್‌ನ ಸರಬರಾಜು ಕೊಳವೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

### ಊ. ರಕ್ತ ನಿಧಿ :

ಸಂಸ್ಥೆಯು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ರಕ್ತನಿಧಿಗಾಗಿ ಹೊಂದಾಣಿಕೆ ಒಡಂಬಡಿಕೆ ಮಾಡಿಕೊಂಡು ವಿಕ್ಟೋರಿಯಾ ಆಸ್ಪತ್ರೆ ಸಂಕೀರ್ಣದಲ್ಲಿನ ರಕ್ತನಿಧಿಯಿಂದ ರಕ್ತವನ್ನು ಸಂಗ್ರಹಿಸಿ ರೋಗಿಗಳಿಗೆ ವಿತರಿಸಲಾಗುತ್ತಿದೆ.

### ವೈದ್ಯಕೀಯ ಶಿಕ್ಷಣ (Medical Education):

ಸಂಸ್ಥೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸಂಯೋಜನೆಯೊಂದಿಗೆ ಭಾರತೀಯ ವೈದ್ಯಕೀಯ ಮಂಡಳಿಯ ಶಿಫಾರಸ್ಸಿನಿಂದ ಕೇಂದ್ರ ಸರ್ಕಾರದಿಂದ ಡಿ.ಎಂ.ನೆಫ್ರೋಲಜಿ 2 ಅಭ್ಯರ್ಥಿ ಹಾಗೂ ಎಂ.ಸಿ.ಎಚ್.ಯುರಾಲಜಿ 6 ಸ್ನಾತಕೋತ್ತರ ಅಭ್ಯರ್ಥಿಗಳಿಗೆ ವಿದ್ಯಾಭ್ಯಾಸ ನೀಡಲಾಗುತ್ತಿದೆ.

ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಸಂಯೋಜನೆ ಮೇರೆಗೆ ಸಂಸ್ಥೆಯಲ್ಲಿ ಒಂದು ವರ್ಷದ ಫೆಲೋಷಿಪ್ ಇನ್ ರೀನಲ್ ಡಯಾಲಿಸಿಸ್ ಕೋರ್ಸ್‌ನ್ನು 20 ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ.

### ಅರೆ-ವೈದ್ಯಕೀಯ ಕೋರ್ಸ್ (Para Medical Course):

ಕರ್ನಾಟಕ ಸರ್ಕಾರದ ಪ್ಯಾರಾ ಮೆಡಿಕಲ್ ಬೋರ್ಡ್‌ನಿಂದ ಸಂಸ್ಥೆಗೆ, ಡಯಾಲಿಸಿಸ್ ತಂತ್ರಜ್ಞರ ಕೋರ್ಸ್‌ಗೆ ಅನುಮತಿ ದೊರೆತಿದ್ದು, ಪ್ರತಿವರ್ಷ 20 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ವಿದ್ಯಾಭ್ಯಾಸ ನೀಡಲಾಗುತ್ತಿದೆ. ಅಲ್ಲದೇ ಶಸ್ತ್ರಚಿಕಿತ್ಸೆ ತಂತ್ರಜ್ಞರ ಕೋರ್ಸ್‌ಗೆ 20 ವಿದ್ಯಾರ್ಥಿಗಳಿಗೆ ಹಾಗೂ ಪ್ರಯೋಗಾಲಯ ತಂತ್ರಜ್ಞರ ಕೋರ್ಸ್‌ಗೆ 10 ವಿದ್ಯಾರ್ಥಿಗಳಿಗೆ ತರಬೇತಿಗಾಗಿ ಪ್ರವೇಶ ನೀಡಿ ವಿದ್ಯಾಭ್ಯಾಸ ನೀಡಲು ಅನುಮತಿ ದೊರೆತಿದ್ದು, 2017-18ನೇ ಸಾಲಿನಿಂದ ಪ್ರವೇಶ ನೀಡಿ ವಿದ್ಯಾಭ್ಯಾಸ ನೀಡಲಾಗುತ್ತಿದೆ.



### ಮುಂದುವರಿದ ವೈದ್ಯ ಶಿಕ್ಷಣ ಕಾರ್ಯಕ್ರಮ:

## (Continuing Medical Education Programme):

ಸಂಸ್ಥೆಯ ವೈದ್ಯಕೀಯ ಶಿಕ್ಷಣ ಸಿಬ್ಬಂದಿಗಳು ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ವೈಜ್ಞಾನಿಕ ಸಮಾವೇಶಗಳಲ್ಲಿ ಭಾಗವಹಿಸಿ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿರುತ್ತಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 33 ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಮಂಜೂರಾಗಿರುವ ಡಯಾಲಿಸಿಸ್ ಘಟಕವನ್ನು ಅನುಷ್ಠಾನಗೊಳಿಸಲು ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ವೈದ್ಯರು, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು ಹಾಗೂ ಗ್ರೂಪ್-ಡಿ ನೌಕರರಿಗೆ ತರಬೇತಿಯನ್ನು ಒಂದು ತಿಂಗಳವರೆಗೆ ನೋಡಲ್ ಕಾರ್ಯಾಲಯವಾಗಿ ನಮ್ಮ ಸಂಸ್ಥೆಯು ನೀಡಿದೆ. 2008 ರಿಂದ 2019 ರವರೆಗೆ ಒಟ್ಟು 94 ವೈದ್ಯರು, 170 ಶುಶ್ರೂಷಕರು, 59 ಪ್ರಯೋಗಶಾಲಾ ತಂತ್ರಜ್ಞರು ಹಾಗೂ 42 ಮಂದಿ ಗ್ರೂಪ್ - ಡಿ ನೌಕರರಿಗೆ ತರಬೇತಿ ನೀಡಲಾಗಿದೆ. ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳ ವಿವರ ಈ ಕೆಳಕಂಡಂತಿವೆ :

(1) ಬೆಂಗಳೂರು ಗ್ರಾಮಾಂತರ (2) ಚಿತ್ರದುರ್ಗ, (3) ದಾವಣಗೆರೆ, (4) ಕೋಲಾರ, (5) ಶಿವಮೊಗ್ಗ, (6) ಚಿಕ್ಕಬಳ್ಳಾಪುರ, (7) ರಾಮನಗರ, (8) ತುಮಕೂರು, (9) ಮೈಸೂರು, (10) ಮಂಡ್ಯ, (11) ಮಂಗಳೂರು (ದ.ಕ), (12) ಚಿಕ್ಕಮಗಳೂರು, (13) ಚಾಮರಾಜನಗರ, (14) ಕೊಡಗು, (15) ಹಾಸನ, (16) ಉಡುಪಿ, (17) ಬೆಳಗಾಂ, (18) ಬಾಗಲಕೋಟೆ, (19) ಬಿಜಾಪುರ, (20) ಧಾರವಾಡ, (21) ಗದಗ, (22) ಹಾವೇರಿ, (23) ಕಾರವಾರ (ಉ.ಕ), (24) ಚಿಕ್ಕೋಡಿ, (25) ಗುಲ್ಬರ್ಗ, (26) ಕೊಪ್ಪಳ, (27) ಬೀದರ್, (28) ಬಳ್ಳಾರಿ, (29) ರಾಯಚೂರು, (30) ಯಾದಗಿರಿ (31) ಹೊಳೆನರಸೀಪುರ, (32) ಶಿರಹಟ್ಟಿ ಮತ್ತು (33) ತೀರ್ಥಹಳ್ಳಿ.

### ಕಾರ್ಯಾಗಾರಗಳು :

1. T.S. Jairam Live Operative Workshop conducted in the month of September 2017.
2. DNB Exam conducted by National Board hosted by Institute of Nephro-Urology in the month of November 2017.
3. Pyeloplasty workshop conducted in the month of November 2017.
4. Mock Exam conducted in the month of December 2017.
5. Reconstructive Urology Workshop conducted in the month of August 2018.
6. Bio Statistics Lecture Series conducted from January 2018 to February 2018.
7. Plasma Pheresis CME conducted on August 2018.
8. APD Cycler Demonstration Program conducted on October 2018.

### ಗ್ರಂಥಾಲಯ:

ಸಂಸ್ಥೆಯ ಗ್ರಂಥಾಲಯದಲ್ಲಿ ಯುರಾಲಜಿ, ನೆಫ್ರೋಲಜಿ, ಪೆಥಾಲಜಿ, ಮೈಕ್ರೋಬಯಾಲಜಿ, ಅನೆಸ್ತೇಶಿಯಾಲಜಿ, ರೇಡಿಯಾಲಜಿ, ನರ್ಸಿಂಗ್‌ಗೆ ಸಂಬಂಧಿಸಿದಂತೆ ಸೂಕ್ತವಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜರ್ನಲ್ಸ್‌ಗಳು ಹಾಗೂ ವೈದ್ಯಕೀಯ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಸಂಸ್ಥೆಯಲ್ಲಿ ಒಟ್ಟು 386 ಉತ್ತಮ ದರ್ಜೆಯ ಹಾಗೂ ಪರಾಮರ್ಶನ ಪುಸ್ತಕಗಳಿದ್ದು, ಅಂತರ್ಜಾಲ ಸೌಲಭ್ಯವನ್ನೊಳಗೊಂಡಂತೆ ಆಧುನಿಕ ಗ್ರಂಥಾಲಯವನ್ನು ರೂಪಿಸಲಾಗಿದೆ. ವೈದ್ಯ ಶಿಕ್ಷಕರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಉಪಯುಕ್ತ ವ್ಯಾಸಂಗಕ್ಕಾಗಿ ಸಂಸ್ಥೆಯು, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಹೊಂದಾಣಿಕೆಯ ಒಡಂಬಡಿಕೆ ಮಾಡಿಕೊಂಡಿದೆ.

### ವೈದ್ಯಕೀಯ ಸೌಲಭ್ಯಗಳಿಗೆ ನಿಗಮ / ಸಂಘ ಸಂಸ್ಥೆಗಳಿಂದ ಮಾನ್ಯತೆ:

ಸರ್ಕಾರ, ಸರ್ಕಾರಿ ಸ್ವಾಮ್ಯದ ನಿಗಮಗಳು, ಸಂಘ ಸಂಸ್ಥೆಗಳು, ನಿಗಮದ ವತಿಯಿಂದ ದಾಖಲಾಗುವ ರೋಗಿಗಳಿಗೆ ವೈದ್ಯಕೀಯ ವೆಚ್ಚಗಳಿಗೆ ಮರುಪಾವತಿ ಆಧಾರದ ಮೇಲೆ ವೈದ್ಯಕೀಯ ಸೇವಾ ಸೌಲಭ್ಯಗಳಿಗೆ ಸಂಸ್ಥೆಯು ಮಾನ್ಯತೆ ಹೊಂದಿದೆ.

1. ಮಾನ್ಯ ಪ್ರಧಾನಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿ ಯೋಜನೆ.
2. ಕರ್ನಾಟಕ ರಾಜ್ಯ ಮುಖ್ಯಮಂತ್ರಿಯವರ ವೈದ್ಯಕೀಯ ಪರಿಹಾರ ನಿಧಿ ಯೋಜನೆ.
3. ಕಾರ್ಮಿಕರ ರಾಜ್ಯ ವಿಮಾ ನಿಗಮ, ಕಾರ್ಮಿಕರ ರಾಜ್ಯ ವಿಮಾ ಯೋಜನೆ.
4. ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿ.ಜಿ.ಎಚ್.ಎಸ್).
5. ಕಿಡ್ನಿ ಸುರಕ್ಷಾ ಯೋಜನೆ.
6. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ.
7. ಪರಿಶಿಷ್ಟ ಜಾತಿ ಉಪಯೋಜನೆ.
8. ಪರಿಶಿಷ್ಟ ಪಂಗಡ ಉಪಯೋಜನೆ.
9. ಶ್ರೀ ಜಯದೇವ ಹೃದ್ರೋಗ ಸಂಸ್ಥೆ.
10. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.
11. ಲಾರೆನ್ಸ್ ಫರ್ನಾಂಡಿಸ್ ಫೌಂಡೇಶನ್ ಟ್ರಸ್ಟ್.
12. ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್.
13. ಹಟ್ಟಿ ಚಿನ್ನದ ಗಣಿ ನಿಗಮ ನಿಯಮಿತ.
14. ಕೇಂದ್ರ ಕಾರಾಗೃಹ ಖೈದಿಗಳ ಚಿಕಿತ್ಸಾ ಯೋಜನೆ.



### 2017–18ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ಈ ಕೆಳಕಂಡಂತಿದೆ :

- ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಕಿಡ್ನಿ ಸುರಕ್ಷಾ ಯೋಜನೆಯಡಿ ಮೂತ್ರಪಿಂಡ ಕಸಿ ಹೊಂದಿದ ಫಲಾನುಭವಿಗಳಿಗೆ ಅಜೀವಪರ್ಯಂತ ಜೀವರಕ್ಷಕ ಔಷಧಿಗಳನ್ನು ವಿತರಿಸಲಾಗುತ್ತಿದೆ.
- ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳ ಹಿತದೃಷ್ಟಿಯಿಂದ ಡಯಾಲಿಸಿಸ್ ಘಟಕದ ಉಪಯೋಗಕ್ಕಾಗಿ ಪರ್ಯಾಯ ವ್ಯವಸ್ಥೆಯಾಗಿ ಸ್ಥಳೀಯ ಶಾಸಕರ ನಿಧಿಯಿಂದ ಕೊಳವೆ ಬಾವಿಯನ್ನು ಕೊರೆಸಲಾಗಿದೆ.
- ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳ ಡಯಾಲಿಸಿಸ್ ಒತ್ತಡವನ್ನು ಸರಿದೂಗಿಸಲು ಹೆಚ್ಚುವರಿಯಾಗಿ 2 ಸಾವಿರ ಲೀಟರ್ ನೀರನ್ನು ಶೋಧಿಸುವ ಸಾಮರ್ಥ್ಯ ಹೊಂದಿರುವ ಆರ್.ಓ. ಪ್ಲಾಂಟ್‌ನ್ನು ಅಳವಡಿಸಲಾಗಿದೆ.
- ಸಂಸ್ಥೆಯ ಪ್ರಸಕ್ತ ಕಟ್ಟಡಕ್ಕೆ ಹೊಂದಿಕೊಂಡಂತೆ ರೂ. 16,00,00,000 (ರೂಪಾಯಿಗಳು ಹದಿನಾರು ಕೋಟಿ ಮಾತ್ರ) ವೆಚ್ಚದಲ್ಲಿ ಅನೆಕ್ಸ್ ಕಟ್ಟಡ ಕಾಮಗಾರಿ ಕಾರ್ಯ ಪ್ರಗತಿಯಲ್ಲಿದೆ.
- ಸರ್ಕಾರವು ನಿರ್ದೇಶಿಸಿರುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆ.ಆರ್.ಆಸ್ಪತ್ರೆಯ ಕಟ್ಟಡದ ನಾಲ್ಕನೇ ಅಂತಸ್ತಿನಲ್ಲಿ ನೆಫ್ರೋ–ಯುರಾಲಜಿ ಸಂಸ್ಥೆಯ ಯೂನಿಟ್‌ನ್ನು ಪ್ರಾರಂಭಿಸಿದ್ದು, ಕಾರ್ಯನಿರ್ವಹಿಸುತ್ತಿದೆ.
- ಸಂಸ್ಥೆಯಲ್ಲಿ "ಪೆರಿಟೋನಿಯಲ್ ಡಯಾಲಿಸಿಸ್" ಚಿಕಿತ್ಸೆಯನ್ನು ಮುಂದುವರೆಸಲಾಗಿದೆ.
- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸಂಸ್ಥೆಯಲ್ಲಿ ಡಿಪ್ಲೋಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ ಕೋರ್ಸ್ 10 ಸೀಟುಗಳು ಹಾಗೂ ಡಿಪ್ಲೋಮೋ ಇನ್ ಆಪರೇಷನ್ ಥಿಯೇಟರ್ ಕೋರ್ಸ್‌ನ್ನು 20 ಸೀಟುಗಳ ಮಿತಿಯೊಂದಿಗೆ ನೂತನವಾಗಿ ಪ್ರಾರಂಭಿಸಲಾಗಿದೆ.
- ಡಿಪ್ಲೋಮೋ ಇನ್ ರೇಡಿಯಾಲಜಿ ಟೆಕ್ನಿಷಿಯನ್ ಕೋರ್ಸ್‌ನ್ನು 10 ಸೀಟುಗಳ ಮಿತಿಯಲ್ಲಿ ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ.
- ಸಂಸ್ಥೆಯಲ್ಲಿ ಖಾಲಿಯಿರುವ ಎಲ್ಲಾ ವೃಂದದ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ.
- ನೆಫ್ರೋಲಜಿ ಕಾಯಿಲೆಗೆ ಸಂಬಂಧಿಸಿದಂತೆ ಕಾಯಿಲೆಯ ಸ್ವರೂಪವನ್ನು ತಿಳಿದು, ಜಾಗೃತಿ ಮೂಡಿಸುವ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ.
- 2017–18ನೇ ಶೈಕ್ಷಣಿಕ ವರ್ಷದಲ್ಲಿ ಬಿ.ಎಸ್.ಸಿ. ಇನ್ ರೀನಲ್ ಡಯಾಲಿಸಿಸ್ ಕೋರ್ಸ್‌ನ್ನು ನೂತನವಾಗಿ ಪ್ರಾರಂಭಿಸಲಾಗಿದೆ.

03 :-

**2018–19ನೇ ಸಾಲಿನ ಭಾವೀ ಕಾರ್ಯಕ್ರಮಗಳು:**

- ➢ ಪ್ರಸ್ತುತ ಸಂಸ್ಥೆಗೆ ಹೊಂದಿಕೊಂಡಿರುವ ಖಾಲಿ ನಿವೇಶನದಲ್ಲಿ ಸುಮಾರು 120 ಹಾಸಿಗೆ ಸೌಲಭ್ಯವುಳ್ಳ ಸುಸಜ್ಜಿತ ಅನೆಕ್ಸ್ ಕಟ್ಟಡವನ್ನು ನಿರ್ಮಿಸುವುದು.
- ➢ ಸಂಸ್ಥೆಯಲ್ಲಿ ಲಭ್ಯವಿರುವ ಚಿಕಿತ್ಸಾ ವಿಧಾನಗಳನ್ನು ಎನ್.ಎ.ಬಿ.ಹೆಚ್ ಮಾದರಿಯಲ್ಲಿ ಮೇಲ್ದರ್ಜೆಗೇರಿಸುವುದು.
- ➢ ಸಂಸ್ಥೆಯಲ್ಲಿ ಖಾಲಿಯಿರುವ ವಿವಿಧ ಬೋಧಕ ಹಾಗೂ ಬೋಧಕೇತರ ವೃಂದಗಳಿಗೆ ಅರ್ಹತೆ ಮತ್ತು ರೋಸ್ಟರ್ ನಿಯಮಗಳ ಪ್ರಕಾರ ನೇಮಕಾತಿ ಮಾಡಿಕೊಳ್ಳುವುದು.
- ➢ ಸಂಸ್ಥೆಯಲ್ಲಿ ಪ್ರಸ್ತುತ ಇರುವ ಡಿ.ಎಂ. ನೆಫ್ರೋಲಜಿ 02 ಸೀಟುಗಳ ಮಿತಿಯನ್ನು 04 ಸೀಟುಗಳಿಗೆ ವಿಸ್ತರಿಸುವುದು.
- ➢ ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿ ಮಾಡುವುದು.
- ➢ ರೋಗಿಗಳಿಗೆ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಉತ್ತಮ ಚಿಕಿತ್ಸೆ ನೀಡುವ ಸಲುವಾಗಿ ಡ ವೆನ್ಸಿ ಮಾದರಿಯ ರೋಬೋಟಿಕ್ ಯಂತ್ರವನ್ನು ಅಳವಡಿಸುವುದು.

04 :-

**ನೆಫ್ರೋ–ಯುರಾಲಜಿ ಸಂಸ್ಥೆ,**

**ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002**

**2017–2018 ನೇ ಸಾಲಿನ ಆರ್ಥಿಕ ಸಮಿತಿ ಸಭಾ ಸದಸ್ಯರ ಹೆಸರು ಮತ್ತು ವಿಳಾಸ:**

(1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ, ನೆ.ಯು.ಸಂ., ಬೆಂಗಳೂರು.

**ಸದಸ್ಯರು:**

(1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ನಂ. 610, 6ನೇ ಮಹಡಿ, 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–01.

(2) ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕೊಠಡಿ ಸಂಖ್ಯೆ : 305, 3ನೇ ಮಹಡಿ, 4ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು–01.

(3) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು–09.

(4) ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–02.



**ವಿಶೇಷ ಆಹ್ವಾನಿತರು:**

(1) ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು–560 001.

(2) ಮೆ॥ ಎಮ್.ಕೆ.ಪಿ.ಎಸ್ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್, ನಂ.3, ತುಳಸಿ ಅಪಾರ್ಟ್‌ಮೆಂಟ್, 8ನೇ ಅಡ್ಡರಸ್ತೆ, ಲಕ್ಷ್ಮೀನಗರ, ಶಾಂತಿನಗರ, ಬೆಂಗಳೂರು–27.

**2017–2018ನೇ ಸಾಲಿನ ಆಡಳಿತ ಮಂಡಳಿ ಸಭಾ ಸದಸ್ಯರ ಹೆಸರು ಮತ್ತು ವಿಳಾಸ:**

(1) ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ನೆ.ಯು.ಸಂ., ಬೆಂಗಳೂರು.

(2) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ನೆ.ಯು.ಸಂ., ಬೆಂಗಳೂರು.

**ಸದಸ್ಯರು :**

(1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು–01

(2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಕರ್ನಾಟಕ ಸರ್ಕಾರ, ಬೆಂಗಳೂರು.

(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ನಂ. 610, 6ನೇ ಮಹಡಿ, 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು.

(4) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

(5) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.

(6) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

(7) ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು.

ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 90 ಆರ್ ಜೆ ಯು 2016 (3) ದಿನಾಂಕ : 07.04.2016ರ ಆದೇಶಾನುಸಾರ ಸರ್ಕಾರದಿಂದ ನಾಮಾಂಕಿತರಾದ ಅಧಿಕಾರೇತರ ಸದಸ್ಯರ ವಿವರ :

(1) ಡಾ॥ ಶಿವರುದ್ರಪ್ಪ..

(2) ಡಾ॥ ಎಸ್.ಎನ್. ಅಮಾತ್ಯಪ್ಪನವರ್.

(3) ಡಾ॥ ಮುದ್ದಯ್ಯ.

## 05 :– ವೈದ್ಯಕೀಯ ಹಾಗೂ ಬೋಧಕ ಮತ್ತು ಸಿಬ್ಬಂದಿ ವರ್ಗದವರು:

**ಯುರಾಲಜಿ ವಿಭಾಗ:**

1 ಡಾ॥ ಕೇಶವಮೂರ್ತಿ.ಆರ್., – ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು
2 ಡಾ॥ ಎಂ. ಶಿವಲಿಂಗಯ್ಯ – ಪ್ರಾಧ್ಯಾಪಕರು
3 ಡಾ॥ ಎಂ.ನಾಗಭೂಷಣ – ಸಹ ಪ್ರಾಧ್ಯಾಪಕರು
4 ಡಾ॥ ಜೆ. ಶ್ರೀನಿವಾಸ – ಸಹ ಪ್ರಾಧ್ಯಾಪಕರು
5 ಡಾ॥ ಸಿ.ಎಸ್. ಮನೋಹರ್ – ಸಹ ಪ್ರಾಧ್ಯಾಪಕರು
6 ಡಾ॥ ವಿ. ಶಿವಕುಮಾರ್ – ಸಹಾಯಕ ಪ್ರಾಧ್ಯಾಪಕರು
7 ಡಾ॥ ವಿಶ್ವನಾಥ್ – ಸಹಾಯಕ ಪ್ರಾಧ್ಯಾಪಕರು
8 ಡಾ॥ ಸಂಜಯ್.ಆರ್.ಪಿ. – ಸಹಾಯಕ ಪ್ರಾಧ್ಯಾಪಕರು

**ನೆಫ್ರೋಲಜಿ ವಿಭಾಗ:**

1 ಡಾ॥ ಉಮೇಶ್.ಎಲ್. – ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು
2 ಡಾ॥ ಎಸ್.ಎಂ. ಶಿವಪ್ರಸಾದ್ – ಪ್ರಾಧ್ಯಾಪಕರು
3 ಡಾ॥ ಲೀಲಾವತಿ – ಸಹಾಯಕ ಪ್ರಾಧ್ಯಾಪಕರು
4 ಡಾ॥ ಸಿ.ಜಿ. ಶ್ರೀಧರ್ – ಸಹಾಯಕ ಪ್ರಾಧ್ಯಾಪಕರು
5 ಡಾ॥ ಕಿಶನ್.ಎ. – ಸಹಾಯಕ ಪ್ರಾಧ್ಯಾಪಕರು

**ಅರವಳಿಕೆ ಶಾಸ್ತ್ರ:**

1 ಡಾ॥ ಎಂ.ಎಸ್. ಪ್ರದೀಪ್ – ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು
2 ಡಾ॥ ಲಕ್ಷ್ಮೀಶ್ ಯಾದವ್ – ಸಹಾಯಕ ಪ್ರಾಧ್ಯಾಪಕರು
3 ಡಾ॥ ಹರೀಶ್ ಎಸ್.ಬಿ. – ಸಹಾಯಕ ಪ್ರಾಧ್ಯಾಪಕರು
4 ಡಾ॥ ಸಂಗೀತ. ಆರ್. – ಸಹಾಯಕ ಪ್ರಾಧ್ಯಾಪಕರು

**ರೋಗಲಕ್ಷಣ ಶಾಸ್ತ್ರ ವಿಭಾಗ:**

